ಸದನವು ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು.

ವಿಷಯ: ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಭಾರತೀಯ ಜನತಾ ಪಕ್ಷದ ಶ್ರೀ ಜಗದೀಶ ಶೆಟ್ಟರವರಿಗೆ ಮಾನ್ಯತೆ ನೀಡುವ ಬಗ್ಗೆ.

1. ಪ್ರಕಟಣೆ

ದಿನಾಂಕ 5ನೇ ಮೇ 2013 ರಂದು ರಾಜ್ಯ 14ನೇ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನತಾ ದಳ(ಜಾ) ಪಕ್ಷವು 40 ಸ್ಥಾನಗಳನ್ನು ಮತ್ತು ಭಾರತೀಯ ಜನತಾ ಪಕ್ಷವು ಸಹ 40 ಸ್ಥಾನಗಳನ್ನು ಪಡೆಯುವುದರ ಮೂಲಕ ಸಮಬಲದ ವಿರೋಧ ಪಕ್ಷಗಳಾಗಿದ್ದವು.

ಆದರೆ, ಜನತಾದಳ(ಜಾ) ಪಕ್ಷದ ಸದಸ್ಯರ ತಂಡವು ಅತೀ ಹೆಚ್ಚು ಶೇಕಡಾವಾರು ಮತವನ್ನು ಪಡೆದಿದ್ದ ಹಿನ್ನಲೆಯಲ್ಲಿ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿ ನಿಯಮ 2(2)ರನ್ವಯ ಜನತಾ ದಳ (ಜಾ) ಪಕ್ಷವನ್ನು ಅಧಿಕೃತ ವಿರೋಧ ಪಕ್ಷವೆಂದು ಹಾಗೂ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರನ್ನು ವಿರೋಧ ಪಕ್ಷದ ನಾಯಕರೆಂದು ಮಾನ್ಯತೆ ನೀಡಲಾಗಿತ್ತು.

ವಿಧಾನಸಭೆಗೆ ಆಯ್ಕೆಯಾಗಿದ್ದ ಕರ್ನಾಟಕ ಜನತಾ ಶಾಸಕಾಂಗ ಪಕ್ಷದ 6 ಸದಸ್ಯರುಗಳಲ್ಲಿ 4 ಸದಸ್ಯರುಗಳು ಭಾರತೀಯ ಜನತಾ ಶಾಸಕಾಂಗ ಪಕ್ಷದಲ್ಲಿ ವಿಲೀನಗೊಳ್ಳಲು ಭಾರತ ಸಂವಿಧಾನದ ಅನುಸೂಚಿ 10ರ ಪ್ಯಾರ 4(2)ರಲ್ಲಿ ಉಪಬಂಧಿಸಲಾದಂತೆ ಮತ್ತು ಕರ್ನಾಟಕ ವಿಧಾನಸಭೆಯ (ಪಕ್ಷಾಂತರ ಆಧಾರದ ಮೇಲೆ ಸದಸ್ಯರ ಅನರ್ಹತೆ) ನಿಯಮಾವಳಿಗಳು 1986ರ ಮೇರೆಗೆ ಎಲ್ಲಾ ಷರತ್ತುಗಳನ್ನು ಪೂರೈಸಿರುವುದರಿಂದ ಅವರುಗಳನ್ನು ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸದಸ್ಯರಾಗಿರುತ್ತಾರೆಂದು ಈಗಾಗಲೇ ಆದೇಶಿಸಿರುವುದರಿಂದ ಭಾರತೀಯ ಜನತಾ ಶಾಸಕಾಂಗ ಪಕ್ಷವು ವಿಧಾನಸಭೆಯಲ್ಲಿ 44 ಸದಸ್ಯರುಗಳನ್ನು ಹೊಂದಿದ್ದು ಅತೀ ದೊಡ್ಡ

ವಿರೋಧ ಪಕ್ಷವಾಗಿರುತ್ತದೆ. ಈ ಹಿನ್ನಲೆಯಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಪ್ರಹ್ಲಾದ ಜೋಶಿ ಅವರು ದಿನಾಂಕ: 22.01.2014 ರಂದು ಪತ್ರವನ್ನು ನೀಡಿದ್ದು, ದಿನಾಂಕ: 14.05.2013 ರಂದು ನಡೆದ ಭಾರತೀಯ ಜನತಾ ಪಾರ್ಟಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಶ್ರಿ ಜಗದೀಶ್ ಶೆಟ್ಟರ್ ಅವರನ್ನು ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆಂದು ತಿಳಿಸಿ ಅಂಗೀಕರಿಸಲಾದ ನಿರ್ಣಯದ ಪ್ರತಿಯನ್ನು ನೀಡಿರುತ್ತಾರೆ ಹಾಗೂ ಶ್ರಿ ಜಗದೀಶ್ ಶೆಟ್ಟರ್ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ಮಾಡಲು ಕೋರಿರುತ್ತಾರೆ. ಆದುದರಿಂದ, ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2(2)ರ ರೀತ್ಯಾ ಭಾರತೀಯ ಜನತಾ ಪಕ್ಷವನ್ನು ವಿಧಾನ ಸಭೆಯಲ್ಲಿ ಅಧಿಕೃತ ವಿರೋಧ ಪಕ್ಷವೆಂದು ಹಾಗೂ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ವಿರೋಧ ಪಕ್ಷದ ನಾಯಕರೆಂದು ತಕ್ಷಣದಿಂದ ಜಾರಿಗೆ ಬರುವಂತೆ ಮನ್ನಣೆ ನೀಡಲಾಗಿದೆ

2. ಸಂತಾಪ ಸೂಚನೆ

ವಿಷಯ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಹಾಗೂ ಇನ್ನಿತರು ನಿಧನ ಹೊಂದಿರುವ ಬಗ್ಗೆ.

ಅಧ್ಯಕ್ಷರು:– ಈಗ ಸಂತಾಪ ಸೂಚನೆ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಸಭಾಧ್ಯಕ್ಷರೆ, ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶಾಸಕರಿಂದ ಅಕ್ರಮ ನಡೆಯುತ್ತಿತ್ತೆಂದು ಇವತ್ತಿನ ದಿವಸ ಟಿ.ವಿ.ಯಲ್ಲಿ ದೊಡ್ಡ ಪ್ರಚಾರ ಆಗುತ್ತಿದೆ. ಇದು ಎಲ್ಲ ಶಾಸಕರಿಗೂ ಕೂಡ ಒಂದು ರೀತಿಯಲ್ಲಿ..

ಅಧ್ಯಕ್ಷರು:– ಮಾನ್ಯ ದತ್ತರವರೇ, ಮೊದಲು ಸಂತಾಪ ಸೂಚನೆಯನ್ನು ಮುಗಿಸೋಣ.

ಶ್ರೀ ವೈ.ಎಸ್.ವಿ. ದತ್ತ:– ಆಯಿತು.